# UPSC/KAS ಮುಖ್ಯ ಪರೀಕ್ಷೆಯ ಮಾದರಿ ಉತ್ತರ ಪತ್ರಿಕೆ

ಅಭ್ಯರ್ಥಿಯ ಹೆಸರು: ಶ್ರೀವಿದ್ಯ. R.M.

ವಿಷಯ : ಕನ್ನಡ ಸಾಹಿತ್ಯ.

Email ID:

| Index Table | | | |
|---|---|---|---|
| ಪ್ರಶ್ನೆ ಸಂಖ್ಯೆ | Page No. | ಗರಿಷ್ಠ ಅಂಕಗಳು | ಗಳಿಸಿರುವ ಅಂಕಗಳು |
| 01 | 1. | -12 1/2 - | 8 |
| 02. | 2. | 12 1/2 - | 8. |
| 03 | 3. | 12 1/2 - | 7. |
| 04. | 4. | | 5 |
| 05. | 5. | 12 1/2 - | 5 |
| | | 50 | 33. |

ಒಟ್ಟು ಗಳಿಸಿರುವ ಅಂಕಗಳು: Thirty three Marks.

ಮೌಲ್ಯಮಾಪಕರ ID: AE-K9701

www.nammaiasacademy.com

## 'ಕೊನೆಯ ದಾರಿ'ಯಲ್ಲಿ ಆಧುನಿಕ ಮಹಿಳೆಯ ಆಸೆಗಳು

ವೀಣಾರ 'ಕೊನೆಯ ದಾರಿ' ಕಥೆಯಲ್ಲಿ ಬರುವ ಹೆಣ್ಣಿನ ಮನಸ್ಸು ಸಂಪ್ರದಾಯಸ್ಥರಿಗೆ ದಿಗಿಲನ್ನು ಹುಟ್ಟಿಸುವಂತಿದೆ. ಲೀಲಾ ಎಂಬ ಆಧುನಿಕ ಹೆಣ್ಣಿನ ಮನಸ್ಸಿನ ಆಸೆಗಳನ್ನು ವೀಣಾರವರು ನೇರವಾಗಿ ವಿವರಿಸಿದ್ದಾರೆ.

ಲೀಲಾ ಒಂದು ಕಂಪೆನಿಯಲ್ಲಿ ಕೆಲಸ ಮಾಡುತ್ತಾ ತನ್ನ ಜೀವನವನ್ನು ನಡೆಸುತ್ತಿದ್ದಳು. ಯಾರ ಮೇಲೂ ಅವಲಂಬಿತಳಾಗದೆ ಸ್ವತಂತ್ರ ಬದುಕನ್ನು ನಡೆಸುತ್ತಿದ್ದಳು. ಮದುವೆಯಾದ ಗಂಡನ ಹಿಂಸೆ ತಾಳಲಾರದೆ ಅವನಿಂದ ಬೇರ್ಪಡೆಯಾಗಿ ಒಂಟಿ ಜೀವನ ನಡೆಸುತ್ತಿದ್ದಳು. ಹಿಂದಿನ ಕಾಲದ ಮಹಿಳೆಯಾಗಿದ್ದರೆ ಎಷ್ಟೇ ಕಷ್ಟ ಕೊಟ್ಟರೂ ಗಂಡನಿಂದ ಬೇರ್ಪಡೆಯಾಗುತ್ತಿರಲಿಲ್ಲ. ಆದರೆ ಆಧುನಿಕ ಮಹಿಳೆಯಾದ ಲೀಲಾ ವೈವಾಹಿಕ ಜೀವನವನ್ನು ಧಿಕ್ಕರಿಸಿದ್ದಳು.

ಕಥೆಯನ್ನು ಸ್ವಲ್ಪ ವ್ಯಾಖ್ಯಾನ ಅದರ ಸ್ವಾರಸ್ಯ ಬಗ್ಗೆ ತಿಳಿಸಿ

ಮಗುವಿಗೆ ಜನ್ಮ ನೀಡುವುದು ಪ್ರತಿಯೊಬ್ಬ ಹೆಣ್ಣು ಮಗಳಿಗೆ ಒಂದು ಪವಿತ್ರ ಹಂತ. ಲೀಲಾ ಯಾರಿಂದಲಾದರೂ ಸರಿಯೆ ತನಗೊಂದು ಮಗು ಸಿಕ್ಕರೆ ಸಾಕು ಎಂದು ಹಂಬಲಿಸುತ್ತಿದ್ದಳು. ಸಾಂಪ್ರದಾಯಿಕ ಮಹಿಳೆಯಾಗಿದ್ದರೆ ತನ್ನ ಗಂಡನ ಹೊರತು ಬೇರೆ ಯಾರಿಂದಲೂ ಮಗುವನ್ನು ಅಪೇಕ್ಷಿಸುತ್ತಿರಲಿಲ್ಲ.

ಡಾಕ್ಟರ ಗೋವಿಂದ ಮೂರ್ತಿಯವರು ಲೀಲಾಗೆ 'ಲೀಲಾ, You are a perfect woman' ಎಂದಾಗ ಸಂಕೋಚ ಭಾವನೆಯ ಬದಲು ಅವಳಲ್ಲಿ ಅವಳ ಬಗ್ಗೆ ಅಭಿಮಾನ ಹೆಚ್ಚುತ್ತದೆ.

ಇದು ಬದಲಾದ ತಿಳುವಳಿಕೆ ಬರೆಯಿರಿ

www.nammaiasacademy.com

www.nammaiasacademy.com

ಡಾಕ್ಟರ್ ಗೋವಿಂದ ಮೂರ್ತಿ, ತನ್ನ ಕಂಪೆನಿಯ ಬಾಸ್, ಆಫೀಸಿನ ಎದುರು ಟೇಬಲಿನ ವಿಲಿಯಮ್ಸ್, ವಿನಯ ಶಾಳಕರ್ ಹೀಗೆ ಎಲ್ಲರಿಂದಲೂ ಮೆಚ್ಚುಗೆಯನ್ನು ಅಪೇಕ್ಷಿಸಿ ಕೊನೆಗೆ ನಿರಾಸೆಯಲ್ಲಿ ಮುಳುಗುತ್ತಾಳೆ.

ಕಂಪೆನಿಯಲ್ಲಿ ತನ್ನ ಬಾಸಿನ ಕಾಟ ತಾಳಲಾರದೆ ಅವನ ವಿರುದ್ಧ ಹೋಗಿ ನೌಕರಿಯನ್ನು ಕಳೆದುಕೊಳ್ಳುತ್ತಾಳೆ. ತನ್ನ ಕೆಲಸವನ್ನು ಕಳೆದುಕೊಳ್ಳುವ ಸೂಚನೆ ಇದ್ದರೂ ತನಗಿಷ್ಟವಿಲ್ಲದ ಬಾಸಿನ ವಿರುದ್ಧ ನಿಲ್ಲುವ ಅವಳ ಧೈರ್ಯ ಮೆಚ್ಚುವಂತದ್ದು.

ನೌಕರಿಯನ್ನು ಕಳೆದುಕೊಂಡು ಮನೆಯಲ್ಲಿ ಆಯಾಸದಿಂದ ಮಲಗಿದ್ದಾಗ ಆಕೆಯ ಕನಸಿನಲ್ಲಿ ಬರೀ ಮಕ್ಕಳೇ. ಒಂದಲ್ಲ, ಎರಡಲ್ಲ, ನೂರಾರು ಮಕ್ಕಳು. ಅವೆಲ್ಲವೂ ತನ್ನದೇ ಎಂಬ ಆಸೆ. ತನ್ನ ಜೀವನದಲ್ಲಿ ಬೇಸತ್ತು ಕೊನೆಗೆ ತನ್ನ ತಂದೆಯ ಸ್ನೇಹಿತರಾದ ಶಂಕರಗೌಡರೊಂದಿಗೆ ತನ್ನ ಊರನ್ನು ಸೇರುತ್ತಾಳೆ. ಅವರಿಂದಲಾದರೂ ಒಂದು ಮಗು ಪಡೆಯುವ ಅವಳ ಮನದಾಳದ ಹಂಬಲ ಹೇಳತೀರಲಾರದ್ದು.

> ನೀವು ಬರೆದಿರುವ ಉತ್ತರ ಪ್ರಶ್ನೆಗೆ ಗೌರವ ನೀಡಿದಂತಿದೆ.

> ಎಲ್ಲಾ ಅಂಶಗಳು ಉದಾಹರಣೆಯಾಗಿವೆ ಆದರೆ ಅದರ ನಿರೂಪಣೆ ಇಲ್ಲ

> ಬರವಣಿಗೆಯಲ್ಲಿ ತುಂಬಾ ನಿಧಾನವಿದೆ. ಸಾಮಾಜಿಕ, ಸಾಂಸ್ಕೃತಿಕ ರಾಜಕೀಯತೆಯನ್ನು ಉತ್ತರದಲ್ಲಿ ಯಾವ ರೀತಿ ಬಿಂಬಿಸಬಹುದು ಎಂದು

www.nammaiasacademy.com

ಅಭ್ಯಸಿಸಿ.

ಜನಪದ ಗೀತೆಗಳಲ್ಲಿ ತಾಯಿ- ಮಕ್ಕಳ ಸಂಬಂಧ ಹೇಗೆ ಮೂಡಿ ಬಂದಿದೆ?

ಜನಪದರು 'ಭೂಮಿಯ ನಂತರ ಮಹತ್ವದ ಸ್ಥಾನ ಕೊಟ್ಟಿದ್ದು ತಾಯಿಗೆ. ಅವರು ತಾಯಿಗೆ ನೀಡಿದ ಶ್ರೇಷ್ಠತೆ, ಗೌರವ, ಅಭಿಮಾನಗಳಿಗೆ ಸಮಾನವಾದದ್ದು ಯಾವುದೂ ಇಲ್ಲ. ಇದರಲ್ಲೂ ಹೆಣ್ಣು ಮಗಳೊಬ್ಬಳು ಮದುವೆಯ ನಂತರ ತನ್ನ ತವರನ್ನು, ತಾಯಿಯನ್ನು ಕುರಿತು ಹಾಡಿದ ಗೀತೆಗಳು ಅಪೂರ್ವ. ಗಂಡನ ಮನೆಗೆ ಹೋಗುವಾಗ ತನ್ನ ತವರು ಹರಿರುದ್ಧ ಗರಿಕೆಯಂತೆ ಹಬ್ಬಿ ಹಸಿರಾಗಿ ಅಭಿವೃದ್ಧಿಯಾಗಲಿ ಎಂದು ಹಾರೈಸುತ್ತಾಳೆ.

ಮೊಲೆಹಾಲು ಕುಡಿಸಿದ್ದು ಕಲಸಿಟ್ಟಿ ತಿನಿಸಿದ್ದು
ಚಳಿಬಿದ್ದಿಗೂ ಮಡಿಯು ಹಿಡಿದಿದ್ದ ನಿನ ಸೆರಗ
ಅಳುವುದಕ್ಕೆ ಗೊತ್ತು ಹಡೆದವ್ವ

ಉತ್ತಮವಾಗಿ ಬರೆಯಬಹುದು

ತಾಯಿ ತನ್ನ ಮಗುವಿಗೆ ಹಾಲುಣಿಸಿ, ಲಾಲನೆ ಪಾಲನೆ ಮಾಡಿ, ತಾವಿಲ್ಲದಿರುವ ಚಳಿದಿನಗಳಿಗೂ ತನ್ನ ಸೆರಗೊಡ್ಡಿ ಮಗುವಿಗೆ ನೆರಳಾಗುವ ಅವಳ ಪ್ರೀತಿ ಅಮೋಘವಾದುದು. ತಾಯಿಯಾದವಳಿಗೆ ತನ್ನ ಮಗುವೇ ಸರ್ವಸ್ವ.

ತಾಯಿಲ್ಲ ತವರಿಗೆ ಹೋಗದಿರು ನನಮನವೆ
ನೀರಿಲ್ಲ ಕೆರೆಗೆ ಕರ ಬಂದು ತಿರುಗಾಗ
ಆಗ ನೋಡುವರ ದುಃಖಗಳ

ಈ ಪದ್ಯ ನನ್ನ ಸ್ವಂತ ಅನುಭವಕ್ಕೆ ಬಲು ಹತ್ತಿರ. ನನ್ನ ತಾಯಿ ಮನೆಯಲ್ಲಿದ್ದರೆ ಮನಸ್ಸಿನಲ್ಲೊ ಸಂತಸ ಉಕ್ಕಿ ಹರಿಯುತ್ತದೆ, ಅವಳಿಲ್ಲದಿದ್ದರೆ ಮನಸ್ಸೂ ಖಾಲಿ ಮನೆಯೂ ಖಾಲಿ ಎಂದು ಭಾಸವಾಗುತ್ತದೆ.

ತುಂಬಾ ದಾಹಗೊಂಡು ದಣಿವಾಗಿ, ಅಲ್ಲಲ್ಲಿ ತಿರುಗಿ ಕೆರೆಯ ಬಳಿ ನೀರು ಕುಡಿಯಲೋಗಿ, ನೀರು ಇಲ್ಲದಿರೆ ಎಂತಹ ಅನುಭವವಾಗುತ್ತೋ ಅದೇ ರೀತಿ ಮಗಳು ತನ್ನ ಮನೆಗೆ ಹೋದಾಗ ತಾಯಿ ಇಲ್ಲದಿದ್ದರೇ ಅದೇ ರೀತಿಯ ಶೂನ್ಯ, ದುಃಖ ಅನುಭವವಾಗುತ್ತದೆ → ಸಮಂಜಸವಾಗಿಲ್ಲ

ತಾಯಿ ಮಕ್ಕಳ ಅವಿನಾಭಾವ ಸಂಬಂಧ ಜನಪದ ಗೀತೆಗಳಲ್ಲಿ, ಅತ್ಯದ್ಭುತವಾಗಿ ಮೂಡಿ ಬಂದಿದೆ. ಆ ಗೀತೆಗಳು ಇಂತಹ ಆಧುನಿಕ ತಾಂತ್ರಿಕ ಯುಗದಲ್ಲೂ ತನ್ನ ಸೊಗಡನ್ನು ಕಳೆದುಕೊಳ್ಳದೆ ಅರ್ಥಗರ್ಭಿತವಾಗಿವೆ.

ಉದಾಹರಣೆಯ ಅಗತ್ಯವಿದೆ-

ಹಿಂದಿನ ಕಾಲದಲ್ಲಿ ತಾಯಿಗೆ ಕೊಡುತ್ತಿದ್ದ ಪ್ರೀತಿ, ಗೌರವ ಇಂದಿಗೂ ಮುಂದುವರಿಯಾಗಿದೆ. ಅದೇ ಗೌರವ, ಸಮಾನತೆ ಎಲ್ಲಾ ಹೆಣ್ಣು ಮಕ್ಕಳಿಗೆ ದೊರಕಿದರೆ ನಮ್ಮ ಸಮಾಜದಲ್ಲಾಗುತ್ತಿರುವ ಹಲವಾರು ಅನಾಹುತಗಳನ್ನು ಹಿಮ್ಮೆಟ್ಟಿ ಒಳಿತಿನೆಡೆಗೆ ನಡೆಯಲು ಸಾಧ್ಯವಾಗುತ್ತದೆ.

[illegible] ಮುಂದೆಯೂ [illegible]

ಪ್ರಮುಖ ಟಿಪ್ಪಣಿ:

> ನಿಮ್ಮ [illegible] ಬರವಣಿಗೆಯಲ್ಲಿ ಉದಾಹರಣೆಯ [illegible] ಬೇಕಾಗಿದೆ -

ಕರ್ತೃ - ಕರ್ಮ - ಕ್ರಿಯೆ ಬಳಸುವ ರೀತಿ. ಬರೆಯುವ ಅಭ್ಯಾಸ ಉತ್ತಮಗೊಳ್ಳಿ. ಇದರ ಅಗತ್ಯವಾಗಿದೆ.

ಜನಪದ ಸ್ವರೂಪವನ್ನು ವಿಶ್ಲೇಷಿಸಿ.

ಜನಪದ ಸಾಹಿತ್ಯ ಜಾನಪದದ ಒಂದು ಪ್ರಮುಖ ಅಂಗ. ಜನಪದ ಸಾಹಿತ್ಯ ಜಾನಪದವನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಕರೆದೊಯ್ಯುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇತ್ತೀಚೆಗೆ ಮೈಸೂರು ವಿಶ್ವವಿದ್ಯಾಲಯ ಎಂ.ಎ. ತರಗತಿಗೆ ಜನಪದ ಸಾಹಿತ್ಯವನ್ನು ಪಠ್ಯವಾಗಿ ಅಳವಡಿಸಿರುವುದು ಹೆಮ್ಮೆಯ ಸಂಗತಿ.

'ಜನಪದ' ಮತ್ತು 'ಜಾನಪದ' ಪದಗಳೆರಡೂ ಒಂದೇ ಎನಿಸಿದರೂ ಇವೆರಡಕ್ಕೂ ಬೇರೆ ಅರ್ಥವಿದೆ. ವಿಲಿಯಂ ಜಾನ್‌ಥಾಮ್ಸ್ 1846ರಲ್ಲಿ Folklore ಎಂಬ ಪದವನ್ನು ಬಳಕೆಗೆ ತಂದ. Folk ಎಂದರೆ ಜನಪದ (ಒಂದು ಜನಾಂಗ), lore ಎಂದರೆ ವಿದ್ಯೆ, ಜ್ಞಾನ. ಒಟ್ಟಾರೆ Folklore ಎಂದರೆ ಜಾನಪದ (ಜನಪದವನ್ನು ಕುರಿತ ಜ್ಞಾನ) ಇಲ್ಲವೇ 'ಸಂಪ್ರದಾಯವನ್ನು ಕುರಿತ ವಿಜ್ಞಾನ' ಎಂದು ಅರ್ಥೈಸಿಕೊಳ್ಳಬಹುದು.

ಜನಪದ ಕಲೆ, ಜನಪದ ನೃತ್ಯ, ಜನಪದ ಸಾಹಿತ್ಯ, ಜನಪದ ವೈದ್ಯ, ಜನಪದ ಸಂಗೀತ ಮೊದಲಾದವು ಜಾನಪದದ ಅವಿಭಾಜ್ಯ ಅಂಗಗಳಾಗಿವೆ. ಜನಪದ ಸಾಹಿತ್ಯ ಎನ್ನುವುದು ವಾಙ್ಮಯ ರೂಪದ ಜಾನಪದ (Folklore of the spoken word).

ಇದರ ಮುಖ್ಯ ಭಾಗಗಳೆಂದರೆ
1) ಕಥೆಗಳು
2) ಗೀತೆಗಳು
3) ಒಗಟುಗಳು
4) ಗಾದೆಗಳು

www.nammaiasacademy.com

ಜನಪದ ಕಥೆಗಳನ್ನು Saga(ಸಾಗ), Marchen (ಮಾರ್ಚೆನ್) ಎಂದು ಎರಡು ಭಾಗವಾಗಿ ವಿಂಗಡಿಸಬಹುದು. ಸಾಗ ಕಥೆಗಳು ಸತ್ಯ ಪ್ರತೀತಿಯಾದನೆ ಮಾಡುತ್ತವೆ. ಸ್ಥಳ, ವ್ಯಕ್ತಿ, ಘಟನಾ ವಿಶಿಷ್ಟ್ಯಗಳು, ಕಿನ್ನರ ಕಥೆಗಳನ್ನೊಳಗೊಂಡಿವೆ. ಮಾರ್ಚೆನ್ ವಿಭಾಗವು ಕಟ್ಟು ಕಥೆಗಳನ್ನೊಳಗೊಂಡಿವೆ. ಕಾಲ್ಪನಿಕ ಕಥೆ ಹೇಳುವುದು ಇದರ ಉದ್ದೇಶ. ಪ್ರಾಣಿಗಳು, ಅತಿಮಾನುಷ, ವಿನೋದ, ತಂತ್ರಗಳ ಕಥೆಗಳನ್ನೊಳಗೊಂಡಿವೆ. 4.

ಜನಪದ ಗೀತೆಗಳು ನಮ್ಮ ನಿತ್ಯ ಜೀವನದ ಕಾರ್ಯಗಳ ಜೊತೆಗೆ ನಿರಂತರವಾಗಿ ಹೆಣೆಯಲ್ಪಟ್ಟಿವೆ. ಲಾವಣಿಗಳು, ಗೀತೆಗಳು, ಮಕ್ಕಳ ಹಾಡುಗಳು, ಎಂದು ಹಲವು ಗೀತೆಗಳಿವೆ. ಗೀತೆಗಳು ಭಾವಗೀತೆಯ ಸ್ವರೂಪದವು. ಲಾವಣಿಗಳು ಕಥನ ನಿರೂಪಣೆಯವು. ಅಕ್ಷರಸ್ಥ ಸಮಾಜ ಸಾಹಿತ್ಯ ಸೃಷ್ಟಿ ಹೇಗೆ ವೈಯಕ್ತಿಕವೋ ಹಾಗೆ ಜನಪದ ಗೀತೆಗಳ ನಿರ್ಮಾಣ ಸಾಮೂಹಿಕವಾಗಿದೆ. ಸಮಯ, ಸಂದರ್ಭ, ಕಟ್ಟುಕಟ್ಟಲೆಗಳಿಗೆ ಇವುಗಳ ಬಳಕೆ ಸೀಮಿತವಾಗಿದೆ. 5

ಗಾದೆಗಳು ಶೈಲಿಗೆ ಸಂಬಂಧಿಸಿದಂತೆ ಅವುಗಳು ತಂತ್ರ ನೇರ, ಸರಳ ಒಂದು ಗುಂಡಿನ ಭಾಷೆ. ಜೀವನಾನುಭವ, ಅಭಿವ್ಯಕ್ತಿ ಗಾದೆಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಕಟು ಮೌಲ್ಯಗಳನ್ನು ಮುಖಕ್ಕೆ ಹೊಡೆದಂತೆ ನೇರವಾಗಿ ಹೇಳಲ್ಪಡುತ್ತದೆ. 6.

ಒಗಟುಗಳು ಮನರಂಜನೆಗಾಗಿ ಸೃಷ್ಟಿಯಾದಂತವು. ಅವುಗಳ ಪ್ರಧಾನ ಗುರಿ ಬುದ್ಧಿಯ ಕಸರತ್ತು; ಬೋಧನೆ. ಒಗಟನ್ನು ಬಿಡಿಸಬಲ್ಲವರು ಬದುಕಿನ ಒಗಟುಗಳನ್ನು ಬಿಡಿಸಬಲ್ಲರು ಎಂಬುದು ಅವರ ನಂಬಿಕೆ.

ಜನಪದ ಜೀವನದ ಮೇಲೆ ನಗರೀಕರಣದ ಪ್ರಭಾವ ಬಿದ್ದಿದ್ದಕ್ಕೆ ಜಾನಪದದ ಮೂಲ ಸೊಗಡು ಕಡಿಮೆಯಾಗುತ್ತ ಹೋಗುತ್ತಿವೆ. ಪ್ರಾಚೀನ ಪರಂಪರೆಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

www.nammaiasacademy.com

ಟಿಪ್ಸ್ ಜಾನಪದ ಸ್ವರೂಪದ ಪ್ರಶ್ನೆಗೆ.

1. ನಿಮ್ಮ ಉತ್ತರ ಪ್ರಾರಂಭಿಕೆಯಲ್ಲಿ ಉದಾಹರಣೆಯ ಅವಶ್ಯತೆ ಇದೆ.

2. ಇಂಗ್ಲಿಷ್ ಪದಗಳನ್ನು ಬ್ರಾಕೆಟ್‌ನಲ್ಲಿ ಬರೆಯಿರಿ ಪರಿಚಯದ ಪ್ಯಾರಾದಲ್ಲಿ ಬಳಸಬೇಡಿ

3. ಕೇಳುವುದನ್ನು ಮಾತ್ರ ಕೇಳುವುದಕ್ಕೆ ಹೊಂದುವಂತೆ ಒಂದು ಅಥವಾ ಎರಡು ಸಾಲಿನಲ್ಲಿ ಮುಗಿಸಿ

4+5+6. → ನಿಮಗೆ ಕೇಳಿರುವುದು ಜಾನಪದದ ಸ್ವರೂಪವೆ ಹೊರತು. ಕಥೆ ಗೀತೆ, ಗಾದೆ ಬಗ್ಗೆ ಅಲ್ಲ.

[illegible]

→ ಇಂತಹ ಪ್ರಶ್ನೆಗಳಿಗೆ ಉತ್ತರಿಸುವಾಗ. ಅದು ಬೆಳೆದು ಬಂದಿರುವ ದಾರಿಯನ್ನು ಅಡೆತಡೆಯಿಲ್ಲದೆ ಮುಂದುವರಿಯಬೇಕು.

→ ಇನ್ನು ಬರವಣಿಗೆಯ ಅವಶ್ಯಕತೆಯಿದೆ.

www.nammaiasacademy.com

ಮೂರ್ತಿರಾಯರ ವೈಚಾರಿಕ ನಿಲುವನ್ನು ದೇವರು ಕೃತಿಯ ಹಿನ್ನಲೆಯಲ್ಲಿ ಚರ್ಚಿಸಿ.

ಎ. ಎನ್. ಮೂರ್ತಿರಾಯರು ಆಧುನಿಕ ವಿಚಾರಸಾಹಿತ್ಯದಲ್ಲಿ ಪ್ರಸಿದ್ಧರು. ಅವರು ತಮ್ಮ ಲೋಕಾನುಭವ ಹಾಗೂ ವೈಜ್ಞಾನಿಕ ದೃಷ್ಟಿಯ ಹಿನ್ನಲೆಯಲ್ಲಿ ದೇವರ ಪರಿಕಲ್ಪನೆಯನ್ನು ವಿವರಿಸಿದ್ದಾರೆ. ಯಾವುದೇ ಧರ್ಮವನ್ನು ಹೀಯಾಳಿಸುವ ಉದ್ದೇಶವಿಲ್ಲದೆ ಕೇವಲ ಮತ ಧರ್ಮ, ದೇವರು ಕುರಿತ ವಿಷಯವನ್ನು ವೈಚಾರಿಕ ದೃಷ್ಟಿಯಿಂದ ಪರಿಶೀಲಿಸ-ಬೇಕೆ ಎಂದು ಮುನ್ನುಡಿಯಲ್ಲಿ ಹೇಳಿದ್ದಾರೆ.

ಕೆಲವೊಮ್ಮೆ ಸುನಾಮಿ, ಭೂಕಂಪ, ಚಂಡಮಾರುತ ಮತ್ತೊಮ್ಮೆ ತಂಪಾದ ಗಾಳಿ, ಕಣ್ಮನ ಸೆಳೆಯುವ ಸಮುದ್ರ ತೀರದ ಅಲೆಗಳು, ಶಾಂತ ಪರಿಸರ ಇವುಗಳಿಂದ ಮಾನವ ಆಶ್ಚರ್ಯಚಕಿತನಾಗಿದ್ದಾನೆ. ಯಾವುದೋ ಒಂದು ಶಕ್ತಿ ಇವೆಲ್ಲವನ್ನು ಸೃಷ್ಟಿಸಿದೆ. ಆ ಶಕ್ತಿಯನ್ನೇ 'ದೇವರು' ಎಂದು ಆದಿಕಾಲದಿಂದಲೂ ರೂಢಿಯಲ್ಲಿದೆ. ಪುರಾತನ ಕಾಲದಿಂದಲೂ ನೈಸರ್ಗಿಕ ಸಂಪನ್ಮೂಲಗಳಾದ ಗಾಳಿ, ನೀರು, ಮಳೆ, ಬೆಂಕಿ, ಭೂಮಿಯನ್ನು ಪೂಜಿಸಲ್ಪಡಲಾಗುತ್ತಿದೆ ಎಂದು ಲೇಖಕರು ಉಲ್ಲೇಖಿಸಿದ್ದಾರೆ.

ನಂತರ ದೇವರನ್ನು ಮನುಷ್ಯ ರೂಪದಲ್ಲಿ ಕಾಣುವ ಮಾನವ ವಿವಿಧ ಹೆಸರಲ್ಲಿ ಪೂಜಿಸಲಾರಂಭಿಸಿದ. ವಿಷ್ಣುವಿನವತಾರ, ಶಿವನ ವಿವಿಧ ಕೆಲಸಗಳು ಮಾನವನ ಸಹಜ ಕಾರ್ಯ ಪ್ರವೃತ್ತಿಯನ್ನು ತೋರುತ್ತದೆ. ಅವನನ್ನು ಏಕೆ ದೇವರೆಂದು ಕರೆಯಬೇಕು ಎಂದು ಪ್ರಶ್ನಿಸುತ್ತಾರೆ.

www.nammaiasacademy.com

ದೇವರು ನಿಜವಾಗಿಯೂ ಇರುವುದಾದರೆ ಕಷ್ಟಗಳು ಬಂದಾಗ ಮಾನವನನ್ನು ಅವುಗಳಿಂದ ಪಾರು ಮಾಡಬಹುದು. ಒಬ್ಬ ತಾಯಿ ತನ್ನ ಮಗುವು ಎಷ್ಟೇ ತಪ್ಪು ಮಾಡಿದರೂ ಕ್ಷಮಿಸುವ ಮನೋಭಾವವಿರುವಾಗ, ನಮ್ಮನ್ನು ಸೃಷ್ಟಿಸಿದ ದೇವರು ನಮ್ಮ ತಪ್ಪುಗಳನ್ನು ಮನ್ನಿಸಿ ಸಂಕಷ್ಟಗಳಿಂದ ಪಾರು ಮಾಡಬಹುದಲ್ಲವೇ? ಎಂದು ಮೂರ್ತಿರಾಯರು ಪ್ರಶ್ನಿಸುತ್ತಾರೆ.

ಹ್ಯಾಲಿ ಧೂಮಕೇತುವಿನ ಪ್ರಭಾವ ಬಂದಾಗ ದೇವರು ಸರ್ವಜ್ಞನೂ, ಸರ್ವಶಕ್ತನೂ, ಒಟ್ಟಿಗೆ ಆಗಲು ಸಾಧ್ಯವಿಲ್ಲ ಎಂದು ತಿಳಿಸುತ್ತಾರೆ. ಯಾವುದು ವಿಚಾರ ಶಕ್ತಿಗೆ ಸಮ್ಮತವಲ್ಲವೋ ಅದನ್ನು ಬ್ರಹ್ಮನೇ ಹೇಳಿದರೂ ಒಪ್ಪಬಾರದು. ಎಂದು ಹೇಳುತ್ತಾರೆ.

ನಿಜವಾಗಿಯೂ ದೇವರಿದ್ದರೆ ಹಿಟ್ಲರ್ ಮುಸೋಲಿನಿಯಂತವರನ್ನು ಶಿಕ್ಷಿಸಬೇಕಿತ್ತು, ಭೂಕಂಪಗಳನ್ನು ತಡೆಯಬೇಕಿತ್ತು, ಸಮಾಜದ ಕೆಡುಕುಗಳನ್ನು ನಿಲ್ಲಿಸಬೇಕಿತ್ತು, ನ್ಯೂಕ್ಲಿಯರ್ ಅಸ್ತ್ರಗಳನ್ನು ಬಳಸದಂತೆ ನೋಡಿಕೊಳ್ಳಬೇಕಿತ್ತು. ಆದರೆ ದೇವರು ಇಲ್ಲ ಎಂದು ವಿಚಾರ ಮಂಡಿಸುವ ಲೇಖಕರು "ದೇವರು ಎಂಬ ನಂಬಿಕೆ ಇಹಲೋಕವನ್ನು ಕುರಿತದ್ದಾಗಬೇಕು. ತಂದೆ-ತಾಯಿ, ಹೆಂಡತಿ-ಮಕ್ಕಳು, ಬಂಧುಗಳು -ಸ್ನೇಹಿತರ ಬದುಕನ್ನು ಕುರಿತದ್ದಾಗಬೇಕು. ಇದೇ ಮಾನವ ಕುಲದ ಸೇವೆ. ಇದನ್ನೇ ಮಾನವ ಮತ ಎಂದು ಕರೆಯೋಣ" ಎಂದು ಲೇಖಕರು ಹೇಳುತ್ತಾರೆ.

www.nammaiasacademy.com

ಪ್ರಶ್ನೆಯಲ್ಲಿರುವ ಅಡಗಿರುವ ಮುಖ್ಯ ಅಂಶ.

→ ಮೂರ್ತಿಕಾರರು → ಮಾನವ ಜೀವಿ - -

ಪ್ರತಿಮಾ ಶಿಲೆ. → ತನ್ನ ಅಭಿಪ್ರಾಯ

ದೇವರು → ವಿಶ್ವದ ಒಂದು ಮೂಲ.

1+2+3+4 ⇒

* ಪ್ರಶ್ನೆ ನೀವು ಅರಿತಿರುವ ಅರ್ಥದಲ್ಲಿ

ತಾರ್ಕಿಕವಾದ ಆಧಾರ ಒದಗಿಸುವುದರಲ್ಲಿ ಅಭ್ಯಾಸ ಬೇಕು

Prooper formation is Needed.

⇒ ದೇವರು + ಮನುಷ್ಯನ = ಮಾನವೀಯ ಮೌಲ್ಯ.

ಅದನ್ನು ಬಿಟ್ಟು, ಮೂರ್ತಿಪೂಜೆಯ ಬಗ್ಗೆ

ಹೇಳಿದವರನ್ನು ಎದುರಿಸಿದ ಸಮಾಜ ಮುರಿದಿ.

→ ಶ್ರದ್ಧೆಯ ಅಂತರ್ಯ ಶಕ್ತಿಯನ್ನು ಕಂಡುಹಿಡಿಯಲು

ಪ್ರಯತ್ನಿಸಿ

ಕಾರಂತರ ಬೆಟ್ಟದ ಜೀವ ಕಾದಂಬರಿಯ ಸಂವೇದನೆ ಮತ್ತು ಜೀವನದೃಷ್ಟಿ.

ಶಿವರಾಮ ಕಾರಂತರು ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದ್ವಿತೀಯ ಕಾದಂಬರಿಕಾರರೆನಿಸಿದ್ದಾರೆ. ಇವರದು ವಿವಿಧ ಕ್ಷೇತ್ರಗಳ ಒಡನಾಟದ ಅರ್ಥಪೂರ್ಣ ಜೀವನದೃಷ್ಟಿ.

ಈ ಕಾದಂಬರಿಯಲ್ಲಿ ಗೋಪಾಲಯ್ಯನವರು ಪ್ರಮುಖ ಪಾತ್ರ. ಚಿಕ್ಕಂದಿನಲ್ಲೇ ತಂದೆ-ತಾಯಿಯನ್ನು ಕಳೆದುಕೊಂಡು ಮಾವನ ಆಶ್ರಯದಲ್ಲಿ ಬೆಳೆದವರು. ಗೋಪಾಲಯ್ಯ - ಶಂಕರಮ್ಮನವರ ಒಬ್ಬನೇ ಮಗನಾದ ಶಂಭು ಇಂಗ್ಲಿಷ್ ಶಿಕ್ಷಣ ಪಡೆಯಲು ಮುಂಬೈಗೆ ಹೋದವನು ಮರಳಿ ಬರದಿರುವುದು ಇವರ ದುಃಖಕ್ಕೆ ಕಾರಣವಾಗಿದೆ.

ಗೋಪಾಲಯ್ಯನವರು ಗ್ರಾಮೀಣ ಸಂಪ್ರದಾಯವನ್ನು ಪ್ರತಿಬಿಂಬಿಸಿದರೆ ಇವರ ಮಗ ಶಂಭು ನಗರ ಸಂಸ್ಕೃತಿಯನ್ನು ಹೋಲುತ್ತಾನೆ. ಬೆರಳೆಣಿಕೆಯಷ್ಟು ಜನ ಸಂಚರಿಸುವ 'ಕಳಬೈಲು' ಎಂಬ ಕಾಡಿನ ಮಧ್ಯೆ ವಾಸಿಸುತ್ತಾರೆ. ತಮ್ಮ ಮಗನ ಬಗ್ಗೆ ಇರುವ ನೋವನ್ನು ಗೋಪಾಲಯ್ಯನವರು ಮನಸ್ಸಿನಲ್ಲೇ ಹಿಡಿದಿಟ್ಟಿರುತ್ತಾರೆ. ಆದರೆ ಶಂಕರಮ್ಮ ಆ ನೋವನ್ನು ಯಾರಾದರೂ ಸಿಕ್ಕ ತಕ್ಷಣ ಅವರೆದುರು ತನ್ನ ಅಳಲನ್ನು ತೋಡಿಕೊಳ್ಳುತ್ತಿರುತ್ತಾಳೆ. ಆದರೆ ಗೋಪಾಲಯ್ಯನವರದು ಬೆಟ್ಟದಂತೆ ಗಟ್ಟಿ ಮನಸ್ಸು. ಆದ್ದರಿಂದಲೇ ಕಾದಂಬರಿಯ ಹೆಸರು ಇವರ ಮನಸ್ಥಿತಿಗೆ ಅರ್ಥಪೂರ್ಣವಾಗಿ ಹೋಲುತ್ತದೆ.

ನೀವು ಬರೆಯುವ ಅಂಶದ ಆಧಾರದ ಮೇಲೆ ನಿಲುವನ್ನು ಸೂಚಿಸಬಹುದು.

1 ×2 ×3 ×4 ×5

ಮಕ್ಕಳನ್ನು ಕಳೆದುಕೊಂಡ ಗೋಪಾಲಯ್ಯ ತಮ್ಮ ಅಡಿಕೆ, ತೆಂಗು-ಬಾಳೆ ತೋಟಗಳನ್ನು ಮಕ್ಕಳಿಗಿಂತ ಹೆಚ್ಚು ಪ್ರೀತಿಯಿಂದ ಸಾಕುತ್ತಿರುತ್ತಾರೆ. ಬಾರದ ವಸ್ತುವಿಗಾಗಿ ಕೈಚೆಲ್ಲಿ ಕೂರುವುದಕ್ಕಿಂತ ಇದ್ದುದರಲ್ಲಿ ಸಂತಸ ಪಡಬೇಕೆನ್ನುವ ಇವರ ಮನಸ್ಸು ಬಹು ದೊಡ್ಡದು. ಮನೆಗೆ ಬಂದ ಅತಿಥಿಗಳ ಉಪಚಾರ, ತಮ್ಮೊಡನೆ ಇರುವವರನ್ನು ಸಂತಸದಿಂದ ಮಾತನಾಡಿಸುವುದು ಇವರ ಸಂಸ್ಕೃತಿಯನ್ನು ತಿಳಿಸುತ್ತದೆ.

'ಬದುಕುವುದು ಹೊಟ್ಟೆಗಾಗಿ ಅಲ್ಲ' ಎನ್ನುವುದು ಗೋಪಾಲಯ್ಯರ ವಾದ. ಕಾಯುವುದರಲ್ಲೇ ತೋಟ ಮಾಡುವುದು ವ್ಯರ್ಥ, ಕಾಡುಪ್ರಾಣಿಗಳು ನಮಗೇನನ್ನೂ ಉಳಿಸಲಾರವು ಎಂದು ನಾರಾಯಣ ಹೇಳಿದಾಗ, ಮರಳಿ ಅವನಿಗೆ ನಾರಾಯಣ. ಮಕ್ಕಳನ್ನು ಯಾವ ಮನುಷ್ಯನೂ ಹೊತ್ತುಕೊಂಡು ಹೋಗುವುದಿಲ್ಲ; ದುಡ್ಡು ಕಳೆದರೇನಂತೆ, ಈ ತೋಟದಿಂದಾಗಿ ದುಡಿಯುವರಿಗೆ ಪ್ರಯೋಜನವಾಗಲಿಲ್ಲವೇ? ನಾನು ಹೋದ ಮೇಲೆ ಯಾರಿಗೂ ಉಪಯೋಗಕ್ಕೆ ಬಾರದಿದ್ದರೂ, ಇಲ್ಲಿರುವಷ್ಟು ದಿನ ನಾವು ಸಂತೋಷ ಪಡುವುದು ಸುಳ್ಳೇ? ಎನ್ನುವಲ್ಲಿ ಗೋಪಾಲಯ್ಯನವರ ಆದರ್ಶ ವ್ಯಕ್ತಿತ್ವ ಅಡಗಿದೆ.

ಹೀಗೆ ಗೋಪಾಲಯ್ಯನವರ ಉನ್ನತ ವ್ಯಕ್ತಿತ್ವ ಎಲ್ಲರಿಗೂ ಮಾದರಿಯಾಗಿ ನಿಲ್ಲುತ್ತದೆ. ಎಲ್ಲೋ ದುಃಖ ದುಮ್ಮಾನಗಳ ನಡುವೆಯೂ ಇವರು ಜೀವನವನ್ನು ಪ್ರೀತಿಸುತ್ತಾರೆ. ನಾರಾಯಣನಿಗೆ, ಬೀರಣ್ಣನಿಗೆ, ಭಟ್ಟನಿಗೆ ದೇವರಾಗಿ ಕಾಣುವ ಗೋಪಾಲಯ್ಯ ಸಾರ್ಥಕವಾದ ಬದುಕನ್ನು ನಡೆಸುತ್ತಿದ್ದಾರೆ.

ನಿರಂತರ ಬದ್ಧದ ಜೀವ-ಸಿಬಂದಿ.

> ಕೇಳಿರುವ ಪ್ರಶ್ನೆಯ ಮುಖ್ಯಾಂಶಗಳು.

ಸಿಬಂದಿ → ಸಂವೇದನೆ
→ ಜೀವನ ಸ್ಪೃಷ್ಟಿ.

ಸಲಹೆಗಳು

* ಪ್ರಶ್ನೆಯ ಮುಖ್ಯಾಂಶದ ಬಗ್ಗೆ ವಿವರಿಸಲು.
ಹೊಸ ಶಾಬ್ದಿಕ್ಯ ಬರ.

* 1. ನಿಮಗೆ ಕೇಳಿರುವುದು ಸಂವೇದನೆ / ಜೀವನ ಸ್ಪೃಷ್ಟಿ ಬಗ್ಗೆ.
ನೀವು ಬರೆದಿರುವುದು ಅದಕ್ಕೆ ಉದಾಹರಣೆ ಹೊರತು.
ನಿಮ್ಮಂಜನೀವಾದ ಚಿತ್ರವಲ್ಲ.

2. ಸಂಸ್ಥಾನದ ಬಗ್ಗೆ ನಿಮಗೆ ಕೇಳಿಲ್ಲ. ಈ ರೀತಿ.
ಬೇರೆಯ ಬೇಕೆಂದರೆ ಮೊದಲು ಪ್ರಶ್ನೆ ಬರೆಯುತ್ತಿದ್ದು
ಬಳಿಕ.

3) ಯಾವ ಆಧಾರದಲ್ಲಿ ಈ ಮಾತು ಹೇಳಿದ್ದೀರಿ?
+4 ಮನಸ್ಸು + ಅಳಲು = ? ಅವರ ರಕ್ಷ ಮನಸ್ಸು.
5 ↓ ನಿಮ್ಮಂಜನಿವಾದ ವಿಶ್ವಾಸವಲ್ಲ

*6. ಅವರ ಸಂವಾದದ ಶೈಲಿ ಬರೆಯುವುದು
ಅನವಶ್ಯ → ಶಿರಯು ಚೌಕಂಸಿ. ನಿಮ್ಮ ಸಾಂಸ್ಥಾನಿಕ
ಉತ್ತರ ಇರಬೇಕು.

*7. → ವಾದ - ವಿವಾದದ ಬದಲಿಗೆ ನಿಮ್ಮಗೆ
ಅನವಶ್ಯ ಪ್ರಶ್ನೆಯನ್ನು ಅಧಿಕಯುಕ್ತಿಕೊಳ್ಳ
ಮೊದಲು.

* → ನಿಮ್ಮ ಶೈಲಿ. → ಯಾವುದನ್ನೂ ಕ್ರಂದಾಗಲೇಯು.
ನಿಮ್ಮ ಕಾರಣ

ಕೊನೆಯ ಸಲಹೆ →
* ಯಾವುದೇ ಪ್ರಶ್ನೆಯನ್ನು ಬಿಟ್ಟುಬಿಡುವ ಮೊದಲು.
ಕೆಲಸಕ್ಕೆ ಬಾರ ಯಾರೆಂದರೆ. ಮುಖ್ಯವಾದರನ
ಅಧಿಕಾರನಾಗಿರಬಹುದು.

* ಬ್ರಾಹ್ಮಿ ಶಿಸ್ತಿನಲ್ಲಿ ನಿಮ್ಮ ಗೆಲುವಿನ
ಮಾರ್ಗ ಎನಿಸಿದೆ.

* ~~ಶಿ.~~ ವಿವಿಧ್ಯತೆ ಬರವಣಿಗೆಯ ಶೈಲಿಯು
ತುಂಬ ಎಮುಯುಕ್ತ. →